ಅಮೂರ್ತ ವಿಷಯದ ಬಗ್ಗೆ ತೆಳುವಾಗಿ ಒಂದು ಸುತ್ತು ಹಾಕೋಣ ಬನ್ನಿಮತ್ತೆ.

ಇಡೀ ಜಗತ್ತಿನಾದ್ಯಂತ ನಮ್ಮ ಭಾರತದಲ್ಲಿ, ಅದರಲ್ಲೂ ಹಿಂದೂ ಧರ್ಮದಲ್ಲಿ ಮಾತ್ರ ವಿಶೇಷ ಆಚರಣೆಯಲ್ಲಿರುವ ಈ ಅಮೂರ್ತವಾದ ಜಾತಿ ಪದ್ಧತಿ ಮಾನವ ಸಮಾಜದ ವಿಚ್ಛಿದ್ರಕಾರಕ ಬೆಳವಣಿಗೆಯೇ ಆಗಿದೆ. ಹಾಗಾದರೆ 'ಜಾತಿ' ಅಂದರೆ ಏನು? ಇದನ್ನು ಹುಟ್ಟುಹಾಕಿದವರು ಯಾರು? ಅಥವಾ ಯಾವ ಕಾರಣಗಳಿಂದಾಗಿ ಈ ವ್ಯವಸ್ಥೆ ಜಾರಿಗೆ ಬಂದಿತು? ಯಾವುದರ ಪ್ರಭಾವ ಇದರ ಹುಟ್ಟಿಗೆ ಕಾರಣವಾಯಿತು? ಅಥವಾ ಸ್ವಯಂಭೂವೆ? ಇವೆಲ್ಲ ನಮ್ಮನಿಮ್ಮನ್ನು ಆ ಕಾಲದಿಂದಲೂ ಕಾಡುತ್ತಲೇ ಬಂದಿವೆ. ಇದರ ಕುರಿತು ಅನೇಕ ಚಿಂತಕರು, ಬುದ್ಧಿಜೀವಿಗಳು, ಸಮಾಜವಿಜ್ಞಾನಿಗಳು ಅನೇಕ ಬಗೆಯ ವಿವರಣೆ ಮತ್ತು ಅರ್ಥವಂತಿಕೆಯನ್ನೂ ಮಾಡಿದ್ದಾರೆ. ಅವನ್ನೆಲ್ಲ ಇಲ್ಲಿ ವಿವರಿಸುತ್ತ, ವಿಶ್ಲೇಷಿಸುತ್ತ ಹೋಗಲು ವ್ಯವಧಾನವಿಲ್ಲವೆನ್ನಿ. ಇಷ್ಟಕ್ಕೂ ಇದೇನು ಸಂಶೋಧನಾತ್ಮಕ ಲೇಖನವಲ್ಲ. ಕಣ್ಣೋಟದಲ್ಲಿ ಹೇಳುವುದಾದರೆ 'ಜಾತಿ' ಎಂದರೆ 'ಗುಂಪು'. ಸಮಾನ ಕಾಯಕಾಧಾರಿತವಾದ ಗುಂಪೇ ಜಾತಿ. ಅದು ಕೆಲವು ಜನರ ಗುಂಪಾಗಿರಬಹುದು, ಹಲವು ಜನರ ಗುಂಪಾಗಿರಬಹುದು. ಈ ಗುಂಪು ದ್ರಾವಿಡ–ಆರ್ಯ ಜನಾಂಗಗಳ ಸಾಮೀಪ್ಯದಿಂದ ಹುಟ್ಟಿತೋ ಇಲ್ಲವೆ ಸಂಘರ್ಷದಿಂದ ಹುಟ್ಟಿತೋ ಅಥವಾ ಬೇರೇನಾದರೂ ಕಾರಣಗಳಿಂದ ಹುಟ್ಟಿತೋ ಎಂಬುದನ್ನು ನಾವು ಸಮಾಜ ವಿಜ್ಞಾನಿಗಳಿಗೆ ಬಿಟ್ಟುಬಿಡೋಣ. ಈ 'ಜಾತಿ', 'ಗುಂಪು'ವಿನ ಬಗೆಗಷ್ಟೇ ಗಮನ ಹರಿಸೋಣ. ನೋಡಿ, ಪ್ರತಿಯೊಂದು ಜಾತಿಗೂ ಅದರದೇ ಆದ ನಿರ್ದಿಷ್ಟ ಕೆಲಸವೊಂದು ನಿಗದಿಯಾಗಿದೆ. ಇದನ್ನೇ ಸಂಸ್ಕೃತದಲ್ಲಿ 'ಕಾಯಕ' ಎಂದು ಹೇಳಿರುವುದು. ಮತ್ತು ಈ ಎಲ್ಲ ಜಾತಿಗಳಿಗೂ ಬಹುಪಾಲು ದ್ರಾವಿಡ

